CC –1122/2024
PW –1
CW –1

ದಿನಾಂಕಃ18.12.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ– ಆರೋಪಿಗಳ ಪರ ಶ್ರೀ.ಪಿಎಸ್ ಜೆ ವಕೀಲರಿಂದಃ–

ಎಲ್ಲಿಯವರೆಗೂ ಓದಿದ್ದೇನೆ ಎಂದರೆ ದ್ವಿತೀಯ ಪಿಯುಸಿ. ನನ್ನನ್ನು ಯಾರು ಬೆಳೆಸಿ, ಓದಿಸಿರುತ್ತಾರೆ ಎಂದರೆ ನನ್ನ ತಂದೆ ತಾಯಿ. ನಾನು ಎಷ್ಟು ಜನರ ವಿರುದ್ಧ ಪೋಲೀಸರಿಗೆ ಆಸ್ಪತ್ರೆ ಯಲ್ಲಿದಾಗ ನಿಪಿ 1 ಹೇಳಿಕೆ ನೀಡಿರುತ್ತೇನೆ ಎಂದರೆ 10 ಜನರ ವಿರುದ್ಧ. ನಡೆದಿದೆ ಎನ್ನಲಾದ ಗಲಾಟೆ ಸಮಯದಲ್ಲಿ ನನ್ನ ಗಂಡ ಚಾಸಾ 7 ರವರು ಎಲ್ಲಿದ್ದರು ಎಂದರೆ ಸಾಕ್ಷಿಯು ಕೆಲಸಕ್ಕೆ ಕಚೇರಿಗೆ ಹೋಗಿದ್ದರು ಎಂದು ನುಡಿಯುತ್ತಾರೆ. 112 ಸಹಾಯವಾಣಿಗೆ ಯಾರು ಕರೆಮಾಡಿರುತ್ತಾರೆ ಎಂದರೆ ನಾನು ಮತ್ತು ಚಾಸಾ 7 ರವರು ಎಂದು ನುಡಿಯುತ್ತಾರೆ. ನಾನು ಮತ್ತು ಚಾಸಾ 7 ರವರು ಇಬ್ಬರು ಸೇರಿ 112 ಸಹಾಯವಾಣಿಗೆ ಕರೆಮಾಡಿರುತ್ತೇವೆ ಎಂದು ಹೇಳಿಕೆಯಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ನಡೆದಿದ ಎನ್ನಲಾದ ಗಲಾಟೆ ಸಮಯದಲ್ಲಿ ಆರುಿಪಿಗಳು ನಮ್ಮ ಮನೆಯಲ್ಲಿ ಎಷ್ಟು ಸಮಯ ಇದ್ದರು ಎಂದರೆ ಸಾಕ್ಷಿಯು ನಮ್ಮ ಮನೆಗೆ 7.30 ಕ್ಕೆ ಬಂದು ಸುಮಾರು 1 ಗಂಟೆ ಕಾಲ ಇರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡ ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ಫೈನಾನ್ಸ್ ನಲ್ಲಿ ಕೆಲಸ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಎಲ್ಲಾ ಫೈನಾನ್ಸ್ ಕಚೇರಿಗಳು ಸಂಜೆಗೆ ಕೆಲಸ ಮುಗಿಸುತ್ತವೆ ಎಂದರೆ ಸರಿ. 108 ಆ್ಯಂಬುಲೆನ್ಸ್ ಗೆ ಯಾರು ಕರೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಪೋಲೀಸರು ಗಲಾಟೆ ಸಮಯದಲ್ಲಿ ನಮ್ಮ ಮನೆಗೆ ಯಾವ ಸಮಯದಲ್ಲಿ ಬಂದರು ಎಂದರೆ ಸಾಕ್ಷಿ ಯು ರಾತ್ರಿ 8 ಗಂಟೆಯಲ್ಲಿ ಎಂದು ನುಡಿಯುತ್ತಾರೆ. ಆ್ಯಂಬುಲೆನ್ಸ್ ಯಾವ ಸಮಯಕ್ಕೆ ಬಂದಿರುತ್ತದೆ ಎಂದರೆ ರಾತ್ರಿ 8.45 ಗಂಟೆಯಲ್ಲಿ ಎಂದು ನುಡಿಯುತ್ತಾರೆ.

ಆ್ಯಂಬುಲೆನ್ಸ್ ಬಂದಾಗ ನನ್ನ ಗಂಡ ಚಾಸಾ 7 ರವರು ಎಲ್ಲಿದ್ದರು ಎಂದರೆ ಇನ್ನೂ ಮನೆಗೆ ಬಂದಿರಲಿಲ್ಲ ಎಂದು ನುಡಿಯುತ್ತಾರೆ.

ಆಸ್ಪತ್ರೆಯಲ್ಲಿ ನಾನು ಎಷ್ಟು ದಿನ ದಾಖಲಾಗಿದ್ದರು ಎಂದರೆ 2 ದಿನ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಯಲ್ಲಿ 2 ದಿನ ದಾಖಲಾಗಿದ್ದೆ ಎಂದು ತೋರಿಸಲು ದಾಖಲೆಗಳನ್ನು ಪೋಲೀಸರಿಗೆ ನೀಡಿದ್ದೀರಾ ಎಂದರೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸಾಕ್ಷಿಯು ಆಸ್ಪತ್ರೆಯಲ್ಲಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪಿಂಕಿ ಮತ್ತು ನಯನಾ ನನಗೆ ಏನಾಗಬೇಕು ಎಂದರೆ ನನ್ನ ತಂಗಿಯರು ಎಂದು ನುಡಿಯುತ್ತಾರೆ. ಮು.ಮಾ 1 ಪೋನ್ ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿಯು ಚಾಸಾ 7 ರವರ ಹೆಸರಿನಲ್ಲಿ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸ್ಥಳ ಪಂಚನಾಮೆಯ 4 ಪೋಟೋಗಳನ್ನು ತೋರಿಸಿ ಇದರಲ್ಲಿ ಯಾವುದೇ ಜೋಕಾಲಿ ಕಾಣಿಸುತ್ತಿಲ್ಲ ಎಂದರೆ ಸರಿ. ನಡೆದಿದೆ ಎನ್ನಲಾದ ಗಲಾಟೆ ಸಮಯದಲ್ಲಿ ಘಟನಾ ಸ್ಥಳದಲ್ಲಿ ಆರೋಪಿಗಳು, ಚಾಸಾ 3 ಮತ್ತು 5 ರವರನ್ನು ಹೊರತುಪಡಿಸಿ ಬೇರೆ ಯಾರಿದ್ದರು ಎಂದರೆ ಗೊತ್ತಿಲ್ಲ.

ನನ್ನ ಕೈಗಳಿಂದ ಸುರಿದ ರಕ್ತವನ್ನು ಚಾಸಾ 5 ರವರು ಮ್ಯಾಟ್ ನಿಂದ ಒರೆಸಿದರು ಎಂದು ನಿಪಿ 1 ಹೇಳಿಕೆಯಲ್ಲಿ ಬರೆಸಿದ್ದು ಸದರಿ ಮ್ಯಾಟ್ ನ್ನು ಪೋಲೀರಿಗೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಗಲಾಟೆಯ ಸಮಯದಲ್ಲಿ ಆರೋಪಿಗಳು ಯಾವ ಪದಗಳಿಂದ ಅವಾಚ್ಯವಾಗಿ ಬೈದಿರುತ್ತಾರೆ ಎಂದು ನಿಪಿ 1 ಹೇಳಿಕೆಯಲ್ಲಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ 1 ಹೇಳಿಕೆಯನ್ನು ತೋರಿಸಿ ಯಾವ ಯಾವ ಅವಾಚ್ಯ ಶಬ್ದಗಳು ಬೈದಿದ್ದಾರೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ನಾನು ಪೋಲೀಸರಿಗೆ ಹೇಳಿದ್ದೆ ಆದರೆ ಪೋಲೀಸರು ಬರಿ ಅವಾಚ್ಯ ಶಬ್ದ ಎಂದು ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 1 ಕ್ಕೆ ನಾನು ಓದಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ನಿಪಿ 1 ಕ್ಕೆ ಸಹಿ ಹಾಕುವ ಮುನ್ನ ನಾನು ಹೇಳಿದ ಅವಾಚ್ಯ ಶಬ್ದಗಳನ್ನು ಬರೆದಿಲ್ಲ ಎಂದು ಪೋಲೀಸರಿಗೆ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿದ್ರಾ ಎಂದರೆ ಸಾಕ್ಷಿಯು ಆಸ್ಪತ್ರೆಯಲ್ಲಿ ಕೇಳಿರುತ್ತಾರೆ ಎಂದು

ನುಡಿಯುತ್ತಾರೆ. ಮನೆಯಲ್ಲಿ ಪೋಲೀಸರು ನನ್ನನ್ನು ಏನು ಕೇಳಿಲ್ಲವಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಆಸ್ಪತ್ರೆಗೆ ನಾನು ಯಾವ ಸಮಯಕ್ಕೆ ಹೋಗಿರುತ್ತೇನೆ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ನನ್ನನ್ನು ಯಾರು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಚಾಸಾ 8 ರವರು ಎಂದು ನುಡಿಯುತ್ತಾರೆ.

4 ನೇ ಆರೋಪಿ ಮತ್ತು ನನ್ನ ಅತ್ತೆ ಚಾಸಾ 2 ಹಾಗೂ ನನ್ನ ಗಂಡ ಚಾಸಾ 7 ರವರ ನಡುವೆ ಕಣದ ವಿಚಾರವಾಗಿ ಅಗ್ರಿಮೆಂಟ್ ಆಗಿರುತ್ತದೆ ಎಂದರೆ ಸರಿ. ಅಗ್ರಿಮೆಂಟ್ ನ ಮೊಬಲಗನ್ನು ಚಾಸಾ 2 ಮತ್ತು 7 ರವರು 4 ನೇ ಆರೋಪಿಯಿಂದ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ಅವರಿಗೆ ಗೊತ್ತು ಎಂದು ನುಡಿಯುತ್ತಾರೆ. 4 ನೇ ಆರೋಪಿಗೆ ಚಾಸಾ 2 ಮತ್ತು 7 ರವರು ಅಗ್ರಿಮೆಂಟ್ ಬರೆದುಕೊಟ್ಟಿದ್ದರೂ ಸಹ ಸದರಿ ಜಾಗವನ್ನು ಮತ್ತು ಹಣವನ್ನು ಕಬಳಿಸಬೇಕು ಎಂದು ನಾನು, ಚಾಸಾ 2, 3 ಮತ್ತು 7 ರವರು ದುರುದ್ದೇಶದಿಂದ ಆರೋಪಿಗಳ ವಿರುದ್ಧ ಸುಳ್ಳು ದೂರುನೀಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ಓಡಿಹೋಗಿ ಮದುವೆಯಾಗಿರುತ್ತೇನೆ ಎಂದರೆ ಸರಿ. ನನಗೂ, ಚಾಸಾ 2 ಮತ್ತು 3 ರವರಿಗೆ ಯಾವುದೇ ಹಲ್ಲೆ ಆಗಿಲ್ಲದೇ ಇದ್ದರೂ ಸಹ ಹಾಗೂ ಯಾವುದೇ ಗಾಯಗಳು ಆಗಿಲ್ಲದೇ ಇದ್ದರೂ ಸಹ ನಾವು ನಾಟಕ ಮಾಡಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ ಎಂದರೆ ಸರಿ ಯಲ್ಲ. ಆರೋಪಿಗಳು ನಮ್ಮ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಮು.ಮಾ 1 ನ್ನು ನಾಶಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಅಕ್ರಮ ಗುಂಪು ಕಟ್ಟಿಕೊಂಡು ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿ ದಾಂದಲೆ ಮಾಡಿಲ್ಲ ಎಂದರೆ ಸರಿಯಲ್ಲ. 4 ನೇ ಆರೇಪಿಯನ್ನು ಚಾಸಾ 3 ರವರ ಬಟ್ಟೆ ಹಿಡಿದು ಎಳೆದಾಡಿಲ್ಲ ಹಾಗೂ 8 ನೇ ಆರೋಪಿಯು ಚಾಸಾ 2 ರವರ ತಲೆಕೂದಲು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲವಾಗಲೀ ಎಂದು ಮು.ಮಾ 1 ನ್ನು ನಾನೇ ಹೊಡೆದು ಹಾಕಿ ಪೋಲೀಸರಿಗೆ

ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.